ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

‘ವೆಚ್ಚ ₹1,583 ಕೋಟಿ, ಗಳಿಕೆ ₹5,586 ಕೋಟಿ’

ಅಕ್ರಮವಾಗಿ ಬಳಕೆದಾರರ ಶುಲ್ಕ ಸಂಗ್ರಹಿಸುತ್ತಿರುವ ನೈಸ್: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ನೈಸ್) ಯೋಜನೆಯ ಮೂಲ ವೆಚ್ಚವೇ ₹1,583 ಕೋಟಿಯಷ್ಟಿತ್ತು. ಆದರೆ, ಕಂಪನಿ ಈಗಾಗಲೇ ₹5,586.48 ಕೋಟಿಯಷ್ಟು ಆದಾಯವನ್ನು ಅಕ್ರಮವಾಗಿ ಗಳಿಸಿದೆ’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಯೋಜನೆಯನ್ನು ರಾಜ್ಯ ಸರ್ಕಾರವು ಕೂಡಲೇ ಮುಟ್ಟುಗೋಲು ಹಾಕಿಕೊಳ್ಳಬೇಕು. ನೈಸ್ ರಸ್ತೆಯಲ್ಲಿ ಶುಲ್ಕ ಸಂಗ್ರಹವನ್ನು ತಕ್ಷಣದಿಂದಲೇ ನಿಲ್ಲಿಸಬೇಕು’ ಎಂದು ಒತ್ತಾಯಿಸಿದರು. ಯೋಜನೆಯ ಒಪ್ಪಂದ, ಕರಾರುಗಳು, ಕಂಪನಿಯ ಲೆಕ್ಕಪತ್ರ ಮತ್ತು ನ್ಯಾಯಾಲಯದ ಆದೇಶಗಳನ್ನು ಬಿಡುಗಡೆ ಮಾಡಿದರು.

‘ಆರಂಭದ ದಿನದಿಂದಲೂ ನೈಸ್ ಕಂಪನಿ ಅಕ್ರಮವಾಗಿ ಹೆದ್ದಾರಿ ಬಳಕೆದಾರರ ಶುಲ್ಕವನ್ನು ಸಂಗ್ರಹಿಸುತ್ತಾ ಬಂದಿದೆ. ಮೂಲ ಒಪ್ಪಂದದ ಪ್ರಕಾರ ನಾಲ್ಕು ಪಥಗಳ ಕಾಂಕ್ರೀಟ್ ರಸ್ತೆ, ಸರ್ವಿಸ್ ರಸ್ತೆ ಹಾಗೂ ನಿರ್ವಹಣಾ ಪ್ರದೇಶಗಳನ್ನು (ಲೇ ಬೇ) ನಿರ್ಮಿಸಿದ ನಂತರವೇ ಕಂಪನಿಯು ಬಳಕೆದಾರರ ಶುಲ್ಕ ಸಂಗ್ರಹಿಸಬೇಕಿತ್ತು. ಆದರೆ, ಯಾವುದೇ ನಿಬಂಧನೆ ಪಾಲಿಸದೆ 2008ರಿಂದ ಅಕ್ರಮವಾಗಿ ಶುಲ್ಕ ವಸೂಲಿ ಮಾಡುತ್ತಿದೆ’ ಎಂದು ಆರೋಪಿಸಿದರು.

‘2008ರಲ್ಲಿ ಅಪೂರ್ಣ ರಸ್ತೆಯನ್ನೇ ಬಳಕೆಗೆ ತೆರವು ಮಾಡಿ, ಆ ವರ್ಷವೊಂದರಲ್ಲೇ ₹5.59 ಕೋಟಿ ಸಂಗ್ರಹಿಸಿತ್ತು. 2024-2025ರ ಹೊತ್ತಿಗೆ ವಾರ್ಷಿಕ ಬಳಕೆದಾರರ ಶುಲ್ಕ ಸಂಗ್ರಹವು ₹734.92 ಕೋಟಿಗೆ ಏರಿಕೆಯಾಗಿತ್ತು. ಒಟ್ಟಾರೆ ಈವರೆಗೆ ₹4,756.48 ಕೋಟಿಯಷ್ಟು ಶುಲ್ಕವನ್ನೇ ಸಂಗ್ರಹಿಸಿದೆ’ ಎಂದು ಮಾಹಿತಿ ನೀಡಿದರು.

‘ನೈಸ್ ಕಂಪನಿಗೆ ನೀಡಲಾಗಿದ್ದ ಜಮೀನನ್ನು, ನಿಯಮಗಳನ್ನು ಉಲ್ಲಂಘಿಸಿ ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ. ಜಮೀನು ಮಾರಾಟದಿಂದ ₹384 ಕೋಟಿ, ಭೂಮಿ ಮತ್ತು ನಿರ್ಮಾಣ ಯೋಜನೆಗಳ ಜಂಟಿ ಅಭಿವೃದ್ಧಿಗಳ ಮುಂಗಡವಾಗಿ ₹108 ಕೋಟಿ, ಕನ್ವೆನ್ಷನ್ ಸೆಂಟರ್‌ಗಳಿಂದ ₹338 ಕೋಟಿ ಗಳಿಸಿದೆ. ಈ ಎಲ್ಲವುಗಳಿಂದ ಕಂಪನಿಯು ಒಟ್ಟು ₹5,586.48 ಕೋಟಿ ಗಳಿಸಿದೆ’ ಎಂದು ನೈಸ್ ಕಂಪನಿಯ ಲೆಕ್ಕಪತ್ರಗಳನ್ನು ಪ್ರದರ್ಶಿಸಿದರು.

ಪಕ್ಷದ ನಾಯಕರಾದ ಸುರೇಶ್‌ಗೌಡ, ಚೌಡರೆಡ್ಡಿ ತೂಪಲ್ಲಿ, ಜಿಬಿಎ ಘಟಕದ ಅಧ್ಯಕ್ಷ ಎಚ್‌.ಎಂ. ರಮೇಶ್‌ಗೌಡ, ರಾಜ್ಯ ವಕ್ತಾರ ಎಚ್‌.ಎನ್. ದೇವರಾಜು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನೈಸ್ ಅಕ್ರಮಗಳ ಬಗ್ಗೆ ಡಿ.ಕೆ. ಶಿವಕುಮಾರ್ ಅವರನ್ನು ನಾನು ಪ್ರಶ್ನಿಸುತ್ತಲೇ ಇದ್ದೇನೆ. ಆದರೆ, ಅವುಗಳಿಗೆ ಉತ್ತರಿಸುವುದನ್ನು ಬಿಟ್ಟು, ಅವರು ಬೇರೆಯದೇ ವಿಷಯಗಳ ಬಗ್ಗೆ ಮಾತನಾಡುತ್ತಿದ್ದಾರೆ

ಎಚ್‌.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

‘ಸಾಲು–ಸಾಲು ಅಕ್ರಮ’

‘ಸಚಿವ ಸಂಪುಟ ಸಭೆಯ ಒಪ್ಪಿಗೆ ಪಡೆಯದೆಯೇ 2004ರ ಫೆ. 12ರಂದು ನೈಸ್ ಯೋಜನೆಯ ಅಲೈನ್‌ಮೆಂಟ್ ಮಾರ್ಪಡಿಸಲಾಯಿತು. ಆ ಮೂಲಕ, ಪೆರಿಫೆರಲ್ ರಸ್ತೆಗೆ ಬೇಕಿದ್ದ ಜಮೀನನ್ನು 2,193 ಎಕರೆಯಿಂದ 2,747 ಎಕರೆಗೆ ಮತ್ತು ಎಕ್ಸ್‌ಪ್ರೆಸ್‌ವೇಗೆ ಅಗತ್ಯವಿದ್ದ ಜಮೀನನ್ನು 6,999 ಎಕರೆಯಿಂದ 9,468 ಎಕರೆಗೆ ಹೆಚ್ಚಿಸಿಕೊಂಡರು. ಈ ಬದಲಾವಣೆ ನಿಯಮಬಾಹಿರ ಎಂದು ಜುಲೈ 29ರಂದು ನೀಡಿದ ತೀರ್ಪಿನಲ್ಲಿ ರಾಜ್ಯ ಹೈಕೋರ್ಟ್ ಸ್ಪಷ್ಟವಾಗಿ ಹೇಳಿದೆ’ ಎಂದು ಎಚ್‌.ಡಿ.ಕುಮಾರಸ್ವಾಮಿ ವಿವರಿಸಿದರು.

‘ನೈಸ್ ಯೋಜನೆ ವಿರುದ್ಧ ಸೋಮಶೇಖರ ರೆಡ್ಡಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಕಂಪನಿಯು, ಯೋಜನೆ ಅಡಿಯಲ್ಲಿ ಯಾವುದೇ ಕೆರೆಗಳನ್ನು ಬಳಸಿಕೊಳ್ಳುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಆದರೆ, ಹಲವು ಕೆರೆಗಳನ್ನು ನಾಶ ಮಾಡಿ ರಸ್ತೆ ನಿರ್ಮಿಸಿರುವುದನ್ನು ಎಂಜಿನಿಯರ್ ಒಬ್ಬರು ತಮ್ಮ ವರದಿಯಲ್ಲಿ ದಾಖಲಿಸಿದ್ದಾರೆ’ ಎಂದು ದಾಖಲೆಗಳನ್ನು ಬಿಡುಗಡೆ ಮಾಡಿದರು.

‘2016ರಲ್ಲಿ ಸದನ ಸಮಿತಿ ಅಧ್ಯಕ್ಷರಾಗಿದ್ದ ಟಿ.ಬಿ. ಜಯಚಂದ್ರ ಅವರು, ನೈಸ್ ಯೋಜನೆಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಕಂಪನಿಗೆ ನೀಡಿರುವ ಹೆಚ್ಚುವರಿ ಜಮೀನನ್ನು ಹಿಂಪಡೆದುಕೊಳ್ಳಬೇಕು ಎಂದು ಶಿಫಾರಸು ಮಾಡಿದ್ದರು. 2023ರ ಆಗಸ್ಟ್‌ನಲ್ಲಿ ‘ಈಗಾಗಲೇ ಎಕ್ಸ್‌ಪ್ರೆಸ್‌ವೇ ನಿರ್ಮಾಣವಾಗಿರುವ ಕಾರಣದಿಂದ ನೈಸ್ ರಸ್ತೆಯ ಅಗತ್ಯವಿಲ್ಲ’ ಎಂದು ರಾಜ್ಯ ಸರ್ಕಾರಕ್ಕೆ ಪತ್ರವನ್ನೂ ಬರೆದಿದ್ದರು. ಆದರೆ ಇದು ಯಾವುದನ್ನೂ ಮಾಡದೆ, ತರಾತುರಿಯಲ್ಲಿ ಯೋಜನೆ ಅನುಷ್ಠಾನಕ್ಕೆ ಮುಂದಾಗಿರುವುದು ಏಕೆ’ ಎಂದು ಅವರು ಪ್ರಶ್ನಿಸಿದರು.

11ರಿಂದ ‘ನವರಾತ್ರ ನಮಸ್ಯಾ’

ಬೆಂಗಳೂರು: ರಾಮಚಂದ್ರಾಪುರ ಮಠವು ಇದೇ 11ರಿಂದ 21ರವರೆಗೆ ಗಿರಿನಗರದಲ್ಲಿರುವ ಶಾಖೆಯಲ್ಲಿ ‘ನವರಾತ್ರ ನಮಸ್ಯಾ’ ಶೀರ್ಷಿಕೆಯಡಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ ಅವರು ನವರಾತ್ರಿ ವ್ರತಾಚರಣೆ ಕೈಗೊಳ್ಳಲಿದ್ದಾರೆ.

‘ಮಹಾನಗರದಲ್ಲಿ ಮಹಾ ದೇವಿಯ ಮಹಾರಾಧನೆ’ ಎಂಬ ಶೀರ್ಷಿಕೆಯೊಂದಿಗೆ ವೈವಿಧ್ಯಮಯ ಕಾರ್ಯಕ್ರಮಗಳ ಜತೆಗೆ, ರಾಜರಾಜೇಶ್ವರಿಯ ಉಪಾಸನೆ ನಡೆಯಲಿದೆ. ಒಂಬತ್ತು ದಿನ ಉಪವಾಸ ವ್ರತದೊಂದಿಗೆ ರಾಘವೇಶ್ವರ ಭಾರತಿ ಸ್ವಾಮೀಜಿ ಅವರು ವಿಶೇಷ ಪೂಜೆಯನ್ನು ಸಮರ್ಪಿಸಲಿದ್ದು, ಅವರಿಂದ ಪ್ರತಿದಿನ ಲಲಿತೋಪಾಖ್ಯಾನ ಪ್ರವಚನ ನಡೆಯಲಿದೆ. ಒಂಬತ್ತು ದಿನ ವಿಶೇಷ ಹವನಗಳು ನಡೆಯಲಿದ್ದು, ವಿಜಯದಶಮಿಯ ದಿನ ಶತಚಂಡಿಕಾ ಮಹಾಯಾಗ ಸಂಪನ್ನವಾಗಲಿದೆ. ಪ್ರತಿದಿನ ಅನ್ನಪೂರ್ಣೇಶ್ವರಿ ದೇವಿಗೆ ವಿಶೇಷ ಪೂಜೆ ನಡೆಯಲಿದೆ. ಸಂಜೆ ದುರ್ಗಾದೀಪ ನಮಸ್ಕಾರ, ಮಾತೆಯರಿಂದ ಕುಂಕುಮಾರ್ಚನೆ, ಉಡಿಸೇವೆ ಹಮ್ಮಿಕೊಳ್ಳಲಾಗಿದೆ. ತಂಡಗಳಿಂದ ಭಜನೆಗಳು ನಡೆಯಲಿದ್ದು, ಕಲೋಪಾಸನೆಯ ಮೂಲಕ ದೇವಿಯ ಆರಾಧನೆ ಹಮ್ಮಿಕೊಳ್ಳಲಾಗಿದೆ.

ವಿದ್ಯಾದಶಮಿಯಂದು ‘ನವರಾತ್ರ ನಮಸ್ಯಾ’ದ ಸಮಾರೋಪ ನಡೆಯಲಿದೆ. ಸ್ವಾಮೀಜಿ ಅವರಿಂದ ಆಶೀರ್ವಚನ, ಸಾರ್ವಜನಿಕ ಮಂತ್ರಾಕ್ಷತೆ ಇರಲಿದೆ. ನವರಾತ್ರಿಯ ಪರ್ವಕಾಲದಲ್ಲಿ ವಿವಿಧ ಆಯಾಮಗಳಲ್ಲಿ ರಾಜರಾಜೇಶ್ವರಿಯ ಉಪಾಸನೆ ನಡೆಯದೆ ಎಂದು ನವರಾತ್ರ ನಮಸ್ಯಾ ಸಮಿತಿ ತಿಳಿಸಿದೆ.

ಮೈಸೂರು ರೇಸ್

ಸ್ಪೆಕ್ಟಾಕ್ಯುಲರ್ ಗೆಲ್ಲುವ ನಿರೀಕ್ಷೆ

ಎಸ್.ಎಂ.ಕಾಮಾ ಮ್ಯೂಸಿಕ್ ಆ್ಯಂಡ್ ಪ್ರೊಡಕ್ಷನ್ ಪ್ರೈವೇಟ್ ಲಿಮಿಟೆಡ್ ಮಿಲಿಯನ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಪೆಕ್ಟಾಕ್ಯುಲರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಕೆಳಕಂಡಂತಿವೆ:

1ನೇ ರೇಸ್: ಮಿಸ್ ಸುಲ್ತಾನ 1, ಮಾಸ್ಟರ್‌ಕ್ರಾಫ್ಟ್ 10, ಫ್ಯಾಷನಿಸ್ಟಾ 3
2ನೇ ರೇಸ್: ಸೈಡ್ ಫ್ಲಿಸ್ 2, ಲೆಕ್ಸ್ ಲೂಥರ್ 4, ಜಸ್ಟ್ ಬ್ಲೂಸ್ 5
3ನೇ ರೇಸ್: ಬ್ಲ್ಯಾಕ್ ರೈನ್‌ಫಾರೆಸ್ಟ್ 8, ಆಬ್ಸೊಲ್ಯೂಟ್ ಕಾಂಕ್ವರರ್ 2, ಅನ್ನಾಬೆಲ್ 10
4ನೇ ರೇಸ್: ಫ್ರೆಡೆರಿಕಾ 5, ಮೂನ್ ಸ್ಟಾರ್ 3, ಮಾನಾ 4
5ನೇ ರೇಸ್: ಎನ್‌ಆರ್‌ಐ ಏಸ್ 6, ಗೋಲ್ಡ್ ರೈಡ್ 3, ಡೆಕಾಕಾರ್ನ್ 1
6ನೇ ರೇಸ್: ಡೀಪ್ ರೆಸ್ಪೆಕ್ಟ್ 9, ರೀಗಲ್ ಬ್ಯೂಟಿ 7, ಡ್ಯಾರಿಂಗ್ಟನ್ 3
7ನೇ ರೇಸ್: ಜಾಸ್ಮೈನ್ 6, ಶೀರ್ ಎಲಿಗೆನ್ಸ್ 2, ಫೆರೊನಿಯಾ 7

ಉತ್ತಮ ಬೆಟ್: ಮಿಸ್ ಸುಲ್ತಾನ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಮಲ್ಲಮ್ಮ ಜೊಂಡಿ, ಡಿ.ಎನ್. ಶ್ರೀನಾಥ್‌ಗೆ ‘ಶಾ.ಬಾಲುರಾವ್ ಪ್ರಶಸ್ತಿ’

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ ‘ಶಾ.ಬಾಲುರಾವ್ ಅನುವಾದ ಪ್ರಶಸ್ತಿ’ಗೆ ಡಿ.ಎನ್. ಶ್ರೀನಾಥ್ ಅವರ ‘ಸರ್ದಾರ್ ವಲ್ಲಭಭಾಯಿ ಪಟೇಲ್’ ಕೃತಿ ಹಾಗೂ ‘ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ’ಗೆ ಮಲ್ಲಮ್ಮ ಜೊಂಡಿ ಅವರ ‘ದಿಡುಗು’ ಕೃತಿ ಆಯ್ಕೆಯಾಗಿದೆ. ಪ್ರಶಸ್ತಿಯು ತಲಾ 25 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ. ಎಚ್.ಎಸ್.ಎಂ. ಪ್ರಕಾಶ್, ಬಿ.ಆರ್. ಜಯರಾಮರಾಜೇ ಅರಸ್, ಟಿ.ವೆಂಕಟೇಶ್ ಮೂರ್ತಿ ಮತ್ತು ಎಚ್.ಕೆ. ಮಳಲಿಗೌಡ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ. ಇದೇ 25ರಂದು ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ನಡೆಯುವ ಸಮಾರಂಭದಲ್ಲಿ ಕಲಾವಿದ ಎಂ.ಎಸ್. ಮೂರ್ತಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ತಿಳಿಸಿದ್ದಾರೆ.

ಕಾನೂನು ಶಾಲೆ ಘಟಿಕೋತ್ಸವಕ್ಕೆ ಸಿಜೆಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 34ನೇ ವಾರ್ಷಿಕ ಘಟಿಕೋತ್ಸವ ಇದೇ 17ರಂದು ನಡೆಯಲಿದ್ದು, ವಿ.ವಿ.ಯ ಕುಲಾಧಿಪತಿಯಾಗಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅಧ್ಯಕ್ಷತೆ ವಹಿಸಲಿದ್ದಾರೆ.

ಅಂದು ಬೆಳಿಗ್ಗೆ 11ಕ್ಕೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ರಂಗಕರ್ಮಿ ಅರುಂಧತಿ ನಾಗ್ ಘಟಿಕೋತ್ಸವ ಭಾಷಣ ಮಾಡುವರು. ಕಾನೂನು ಶಾಲೆಯ ಕುಲಪತಿ ಪ್ರೊ.ಸುಧೀರ್ ಕೃಷ್ಣಸ್ವಾಮಿ ವಾರ್ಷಿಕ ವರದಿ ವಾಚಿಸುವರು.

ನ್ಯಾಯಮೂರ್ತಿ ಸೂರ್ಯಕಾಂತ್

ಸೆ.12ರಂದು ನಿಗದಿಯಾಗಿದ್ದ ಘಟಿಕೋತ್ಸವದಲ್ಲಿ ಸಿಜೆಐ ಮತ್ತು ಬಾರ್ ಕೌನ್ಸಿಲ್ ಆಫ್ ಇಂಡಿಯಾ ಮುಖ್ಯಸ್ಥ ಮನನ್ ಕುಮಾರ್ ಮಿಶ್ರಾ ಪಾಲ್ಗೊಳ್ಳುವುದಕ್ಕೆ ವಿದ್ಯಾರ್ಥಿಗಳು ಮತ್ತು ಹಳೆ ವಿದ್ಯಾರ್ಥಿಗಳ ಸಂಘವು ವಿರೋಧ ವ್ಯಕ್ತಪಡಿಸಿದ್ದರಿಂದ ರದ್ದುಗೊಳಿಸಲಾಗಿತ್ತು.

ಹೈದರಾಬಾದ್‌ನ ‘ನ್ಯಾಷನಲ್ ಅಕಾಡೆಮಿ ಆಫ್ ಲೀಗಲ್ ಸ್ಟಡೀಸ್ ಅಂಡ್ ರಿಸರ್ಚ್’ (ನಲ್ಸಾರ್) ವಿ.ವಿಯ 2026ರ ಸಾಲಿನ ಪದವೀಧರರನ್ನು ನೋಂದಣಿ ಮಾಡಿಕೊಳ್ಳದಿರುವಂತೆ ‘ಬಾರ್ ಕೌನ್ಸಿಲ್ ಆಫ್ ಇಂಡಿಯಾ’ (ಬಿಸಿಐ) ನಿರ್ದೇಶನ ನೀಡಿತ್ತು. ವಿಶ್ವವಿದ್ಯಾಲಯದ ಘಟಿಕೋತ್ಸವಕ್ಕೆ ಸಿಜೆಐ ಆಗಮಿಸುವುದನ್ನು ಆಕ್ಷೇಪಿಸಿದ್ದ ವಿದ್ಯಾರ್ಥಿಗಳಿಗೆ ಶಿಕ್ಷೆಯ ರೂಪದಲ್ಲಿ ‘ಬಿಸಿಐ’ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ ಅವರು ಆದೇಶ ಹೊರಡಿಸಿದ್ದರು. ಇದನ್ನು ರಾಷ್ಟ್ರೀಯ ಕಾನೂನು ಶಾಲೆಯ ವಿದ್ಯಾರ್ಥಿಗಳು ಖಂಡಿಸಿದ್ದರು.

ನಗರದಲ್ಲಿ ಇಂದು

‘ಮಾದಕ ವ್ಯಸನ ತಡೆಗಟ್ಟುವಿಕೆ’ ಕುರಿತು ಜಾಗೃತಿ: ಮುಖ್ಯ ಅತಿಥಿ: ಎಂ.ನಾರಾಯಣ, ಆಯೋಜನೆ ಮತ್ತು ಸ್ಥಳ: ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಆಫ್ ಲಾ, ಹುಲ್ಲಹಳ್ಳಿ, ಬೇಗೂರು–ಕೊಪ್ಪ ರಸ್ತೆ, ಬೆಳಿಗ್ಗೆ 8

‘ಪರಮಹಂಸ ಯೋಗಾನಂದರ ಕ್ರಿಯಾಯೋಗ’ ಕುರಿತು ಉಪನ್ಯಾಸ: ಸ್ವಾಮಿ ಶ್ರೇಯಾನಂದ ಗಿರಿ, ಆಯೋಜನೆ: ಯೋಗೋದ ಸತ್ಸಂಗ ಸೊಸೈಟಿ ಆಫ್ ಇಂಡಿಯಾ, ಸ್ಥಳ: ಯೋಗೋದ ಸತ್ಸಂಗ ಧ್ಯಾನ ಕೇಂದ್ರ, ದೊಮ್ಮಲೂರು, ಬೆಳಿಗ್ಗೆ 10.30

ಪಿ.ಎಸ್.ಕಡೇಮನಿ ಅವರ ಕಲಾ ಪ್ರದರ್ಶನ: ಉದ್ಘಾಟನೆ: ಎಸ್.ಎನ್.ಶಶಿಧರ, ಮುಖ್ಯ ಅತಿಥಿ: ಮಹಾಂತೇಶ ಬಿರಾದಾರ, ಅಧ್ಯಕ್ಷತೆ: ಪ.ಸ.ಕುಮಾರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

‘ಇಕೊಗ್ರಾಮ್’ ಸ್ವಚ್ಛ ಗ್ರಾಮ, ಆರೋಗ್ಯದ ಭವಿಷ್ಯ ಕಾರ್ಯಕ್ರಮ: ಮುಖ್ಯ ಅತಿಥಿಗಳು: ಮೀನಾಕ್ಷಿ ಶೇಷಾದ್ರಿ, ಕೃಷ್ಣಬೈರೇಗೌಡ, ಜಿತೇಂದ್ರ ವಿರ್ವಾನಿ, ಆಯೋಜನೆ: ಬೆಟ್ಟಹಲಸೂರು, ಬೆಳಿಗ್ಗೆ 11

‘ಜಾಗತಿಕ ಮಾರುಕಟ್ಟೆಗೆ ಜವಳಿ ಉದ್ಯಮ’ ಕುರಿತು ಕಾರ್ಯಾಗಾರ: ಉದ್ಘಾಟನೆ: ಎ.ಬಿ.ಬಸವರಾಜು, ಮುಖ್ಯ ಅತಿಥಿಗಳು: ಪಿ.ಎಸ್.ಗಿರೀಶ, ಆರ್.ರಮೇಶ, ಸಿ.ಎಸ್.ಯೋಗೇಶ, ಪಿ.ಎಲ್.ಶ್ರೀದೇವಿ, ನಿಂಗಣ್ಣ ಎಸ್.ಬಿರಾದಾರ, ಎಚ್.ಎನ್.ರಾಮಕೃಷ್ಣಯ್ಯ, ಆಯೋಜನೆ: ಕೈಮಗ್ಗ ಮತ್ತು ಜವಳಿ ಇಲಾಖೆ, ಸ್ಥಳ: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ), ನಂ 2, 17ನೇ ಅಡ್ಡರಸ್ತೆ, ಮಾಗಡಿ ಕಾರ್ಡ್ ರಸ್ತೆ, ವಿಜಯನಗರ, ಬೆಳಿಗ್ಗೆ 11

ದಾಸವಾಣಿ ಕಾರ್ಯಕ್ರಮ: ಗಾಯನ: ಅಪರ್ಣಾ ರಾವ್ ಶ್ರೀಹರಿ, ವಯಲಿನ್: ಅಭಯ್ ಸಂಪಿಗೆತಾಯ, ಮೃದಂಗ: ಹರೀಶ್ ಧನಂಜಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿ ಮಠ, 5ನೇ ಬಡಾವಣೆ, ಜಯನಗರ, ಸಂಜೆ 5.15

ಹರಿನಾಮ ಸಂಕೀರ್ತನೆ: ಗಾಯನ: ಶ್ರೀರಾಮ್ ರಕ್ಷಿತ್, ವಯಲಿನ್: ಎಂ.ಎಸ್.ಗೋವಿಂದಸ್ವಾಮಿ, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಪ್ರಕಾಶನಗರ, ಸಂಜೆ 6

‘ವ್ಯಾಯಾಮದಿಂದ ಆರೋಗ್ಯ ಸುಧಾರಣೆ’ ಉಪನ್ಯಾಸ: ಎಂ.ಎಸ್.ಮಂಜುನಾಥ್, ಉಪಸ್ಥಿತಿ: ಎಂ.ಸಿ.ನರೇಂದ್ರ, ಜಗದೀಶ ರೆಡ್ಡಿ, ಮಹಾಂತೇಶ ದೇಗಾವಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ ಸಭಾಂಗಣ, ಎಚ್.ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಸಂಜೆ 6.30

26ನೇ ವರ್ಷದ ಪ್ರವಚನ ವಾಹಿನಿ: ಭಾಗವತ ಅವಧೂತ ಗೀತೆ ಕುರಿತು ಪ್ರವಚನ: ಬ್ರಹ್ಮಣ್ಯತೀರ್ಥ ಆಚಾರ್, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ದಾಸಶ್ರುತಿ ಕಾರ್ಯಕ್ರಮ: ಗಾಯನ: ಪ್ರಭಾ ಸುಬ್ರಹ್ಮಣ್ಯ ಜೋಯಿಸ್, ಕೀಬೋರ್ಡ್: ಸುಬ್ರಹ್ಮಣ್ಯ ಜೋಯಿಸ್, ತಬಲಾ: ಪ್ರಶಾಂತ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7

ಸಾಮಾನ್ಯ ಜ್ಞಾನ ಪರೀಕ್ಷೆ ವಿಜೇತರಿಗೆ ಬಹುಮಾನ ವಿತರಣೆ ಮತ್ತು ಸಂಘದ ಉದ್ಘಾಟನೆ: ಬೈರತಿ ಸುರೇಶ್, ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಮುಖ್ಯ ಅತಿಥಿಗಳು: ಕೆ.ಬಿ.ಶಿವಕುಮಾರ್, ವಿ.ಎಸ್.ಆರಾಧ್ಯ, ಎಲ್.ಮೂರ್ತಿ, ನಿಕೇತ್ ರಾಜ್ ಮೌರ್ಯ, ಅಬ್ದುಲ್ ಅಹದ್, ರಘುನಂದನ್ ಮೂರ್ತಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಧಿಕಾರಿಗಳು ಹಾಗೂ ನೌಕರರ ಐಕ್ಯತಾ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಮಧ್ಯಾಹ್ನ 3



ಜ್ಞಾನಪ್ರಕಾಶ ಸ್ವಾಮೀಜಿ

ಕಾರ್ಪೊರೇಟ್ ಭಾಗವಹಿಸುವಿಕೆ ಶೃಂಗ: ಪ್ರಸ್ತಾವನೆ: ರವಿಶಂಕರ್ ಗುರೂಜಿ, ಮುಖ್ಯ ಅತಿಥಿ: ಮನಿಷಾ ಸಾಬೂ, ಉಪಸ್ಥಿತಿ: ಮೀನೂ ಭಾಂಭಾನಿ, ರೋಹಿಣಿ ಕಾಮತ್, ಪರಮೇಶ್ವರನ್ ಬಾಲಕೃಷ್ಣನ್, ಹರ್ಷಿತ್ ಮುಪ್ಪಿರಿ, ಆಯೋಜನೆ ಮತ್ತು ಸ್ಥಳ: ಯೂತ್ ಫಾರ್ ಸೇವಾ, ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಅಗರ, ಕನಕಪುರ ರಸ್ತೆ, ಬೆಳಿಗ್ಗೆ 10

ರವಿಶಂಕರ್ ಗುರೂಜಿ

ಪುನರ್‌ಮನನ ಕಾರ್ಯಕ್ರಮ: ‘ಸಿನಿಮಾ ಚಿತ್ರಕಥೆ’ ಕುರಿತು ಉಪನ್ಯಾಸ: ಪ್ರಮೋದ್ ಮರವಂತೆ, ಆಯೋಜನೆ ಮತ್ತು ಸ್ಥಳ: ಎಲೆಕ್ಟ್ರಾನಿಕ್ ಮೀಡಿಯಾ ಅಧ್ಯಯನ ವಿಭಾಗದ ಉಪನ್ಯಾಸ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 11

ಪ್ರಮೋದ್ ಮರವಂತೆ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪಿಎನ್‌ಬಿ ಸಾಲ ಮೇಳ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ) ಹಬ್ಬಗಳ ಹೊತ್ತಿನಲ್ಲಿ ರಿಟೇಲ್ ಸಾಲ ಮೇಳ ಆರಂಭಿಸಿದೆ.

ಈ ಮೇಳದ ಅವಧಿಯಲ್ಲಿ ರಿಟೇಲ್ ಗ್ರಾಹಕರಿಗೆ ಗೃಹಸಾಲ, ಕಾರು ಸಾಲ, ಅಡಮಾನ ಸಾಲ, ವೈಯಕ್ತಿಕ ಸಾಲ ಹಾಗೂ ಇತರ ಸಾಲದ ಉತ್ಪನ್ನಗಳ ಮೇಲೆ ಆಕರ್ಷಕ ಪ್ರಯೋಜನಗಳು ಇರಲಿವೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಈ ಅವಧಿಯಲ್ಲಿ ಗೃಹಸಾಲ ಪಡೆಯುವವರ ಪ್ರಕ್ರಿಯಾ ಶುಲ್ಕ ಹಾಗೂ ದಾಖಲಾತಿ ಶುಲ್ಕ ಸಂಪೂರ್ಣವಾಗಿ ಮನ್ನಾ ಆಗುತ್ತದೆ. ಗೃಹಸಾಲದ ಬಡ್ಡಿಯಲ್ಲಿ ಶೇ 0.05ರಷ್ಟು ರಿಯಾಯಿತಿ ಕೂಡ ಸಿಗಲಿದೆ. ಕಾರು ಸಾಲ ಪಡೆಯುವವರಿಗೆ ಪ್ರಕ್ರಿಯಾ ಶುಲ್ಕವನ್ನು ಪೂರ್ತಿಯಾಗಿ ಮನ್ನಾ ಮಾಡಲಾಗುತ್ತದೆ. ಅಲ್ಲದೆ, ಅಡಮಾನ ಸಾಲ ಪಡೆಯುವವರಿಗೆ ಬಡ್ಡಿಯಲ್ಲಿ ಶೇ 0.10ಯಷ್ಟು ರಿಯಾಯಿತಿ ಸಿಗಲಿದೆ. ಹೆಚ್ಚಿನ ಮಾಹಿತಿಗೆ pnb.bank.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಅಥವಾ 1800-1800, 1800-2021 ಸಂಖ್ಯೆಗಳಿಗೆ ಕರೆ ಮಾಡಬಹುದು.

ಪ್ರೊ.ಮಹೇಶ್ ಕಾಕ್ಡೆಗೆ ‘ರಾಮಾನುಜನ್ ಪ್ರಶಸ್ತಿ’

ಬೆಂಗಳೂರು: ಬೀಜಗಣಿತದ ಸಂಖ್ಯಾ ಸಿದ್ಧಾಂತಕ್ಕೆ ನೀಡಿದ ಕೊಡುಗೆಗಾಗಿ ಭಾರತೀಯ ವಿಜ್ಞಾನ ಸಂಸ್ಥೆಯ ಗಣಿತ ವಿಭಾಗದ ಪ್ರೊ.ಮಹೇಶ್ ಕಾಕ್ಡೆ ಅವರನ್ನು ‘ರಾಮಾನುಜನ್ ಪ್ರಶಸ್ತಿ’ಗೆ ಆಯ್ಕೆ ಮಾಡಲಾಗಿದೆ. ಇದು ಅಭಿವೃದ್ಧಿಶೀಲ ರಾಷ್ಟ್ರಗಳ ಯುವ ಗಣಿತ ತಜ್ಞರಿಗಾಗಿ ನೀಡಲಾಗುವ ಪ್ರಶಸ್ತಿ. ಇಂಟರ್ ನ್ಯಾಷನಲ್ ಸೆಂಟರ್ ಫಾರ್ ಥಿಯರಿಟಿಕಲ್ ಫಿಸಿಕ್ಸ್ ಮತ್ತು ಇಂಟರ್ ನ್ಯಾಷನಲ್ ಮ್ಯಾಥಮೆಟಿಕಲ್ ಯೂನಿಯನ್ ಜಂಟಿಯಾಗಿ ಈ ಪ್ರಶಸ್ತಿ ನೀಡುತ್ತದೆ.



ಮಹೇಶ್ ಕಾಕ್ಡೆ

ರಾಷ್ಟ್ರೀಯ ಉತ್ಪಾದಕತಾ ಪರಿಷತ್
(ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಡಿಪಿಐಐಟಿ ಅಡಿಯಲ್ಲಿ)
ಪರಿಸರ ಲೆಕ್ಕಪರಿಶೋಧನೆಗೆ ನಿಯೋಜಿತ ಸಂಸ್ಥೆ (ಇಎಡಿಎ)

ಪರಿಸರ ಲೆಕ್ಕಪರಿಶೋಧಕರಿಗಾಗಿ ಅರ್ಜಿ ಆಹ್ವಾನ

ಭಾರತ ಸರ್ಕಾರದ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಪರಿಸರ ಲೆಕ್ಕಪರಿಶೋಧನೆ ನಿಯಮಾವಳಿಗಳು, 2025ರ ಅಡಿಯಲ್ಲಿ “ಪರಿಸರ ನಿರಾಕ್ಷೇಪಣೆ, ಸಿಆರ್‌ಜೆಡ್, ಐಸಿಆರ್‌ಜೆಡ್ ಮತ್ತು ಐಪಿಜೆಡ್ ನಿರಾಕ್ಷೇಪಣೆಗೆ ಸಂಬಂಧಿತ ಲೆಕ್ಕಪರಿಶೋಧನೆಗಾಗಿನ ಶುಲ್ಕಗಳ ರೂಪುರೇಷೆಗಳ ಜೊತೆಗೆ ರಿಕಗ್ನಿಷನ್ ಆಫ್ ಪ್ರಿಯಾರ್ ಲರ್ನಿಂಗ್ (ಆರ್‌ಪಿಎಲ್) ಮುಖಾಂತರ ಪರಿಸರ ಲೆಕ್ಕಪರಿಶೋಧಕರ ಪ್ರಮಾಣೀಕರಣ ಹಾಗೂ ಗುರುತಿಸುವಿಕೆ ಸಂಬಂಧಿತ ಮಾರ್ಗಸೂಚಿಗಳನ್ನು” ಜಾರಿಗೊಳಿಸಿರುತ್ತದೆ. ಈ ಸಚಿವಾಲಯವು ಸದರಿ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸಲು ಇಎಡಿಎ ಇವರನ್ನು ನಿಯೋಜಿಸಿರುತ್ತದೆ. ಇದೀಗ, ಸೂಕ್ತ ಮಾನದಂಡಗಳನ್ನು ಹೊಂದಿರುವ ಅರ್ಹ ವ್ಯಕ್ತಿಗಳಿಂದ/ ಸಂಘಗಳಿಂದ/ ಸಂಸ್ಥೆಗಳಿಂದ/ ಸಂಘಟನೆಗಳಿಂದ ಕೆಳಗಿನವುಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ:–
- ಸರ್ಟಿಫೈಡ್ ಎನ್ವಿರಾನ್‌ಮೆಂಟ್ ಆಡಿಟರ್–ಇಂಡಿವಿಜುಯಲ್ಸ್
- ರಿಜಿಸ್ಟರ್ಡ್ ಎನ್ವಿರಾನ್‌ಮೆಂಟ್ ಆಡಿಟರ್ – ಇಂಡಿವಿಜುಯಲ್ಸ್/ ಫರ್ಮ್ಸ್/ ಬಾಡಿ ಕಾರ್ಪೊರೇಟ್/ ಇನ್‌ಸ್ಟಿಟ್ಯೂಟ್ಸ್

ಅರ್ಜಿ ನಮೂನೆಗಾಗಿ ಹಾಗೂ ಅರ್ಹತೆ, ಅನುಭವ, ಪ್ರಕ್ರಿಯೆ ಮುಂತಾದ ವಿವರಗಳಿಗಾಗಿ ಭೇಟಿ ಕೊಡಿ: https://eada.npcindia.gov.in

ಕಂಟ್ರೋಲರ್, ಇಎಡಿಎ, ಎನ್‌ಪಿಸಿ
011–24607306
eada.npc@npcindia.gov.in
CBC 05206/11/0001/2627

ಟೀಮ್‌ಲೀಸ್ ಸರ್ವಿಸಸ್ ಲಿಮಿಟೆಡ್
CIN: L74140KA2000PLC118395
ಇನ್ಫಿನಿಕ್ಸ್ ಸ್ಕ್ವೇರ್, ಬಿ-4, ಬಿ-5, ಬಿ-6, ಎಚ್‌ಎಎಲ್ ಇಂಡಸ್ಟ್ರಿಯಲ್ ಎಸ್ಟೇಟ್, ಎಚ್‌ಎಎಲ್ ಜಿಬಿ ಕ್ವಾರ್ಟರ್ಸ್, ವಿಭೂತಿಪುರ, ಬೆಂಗಳೂರು – 560037, ಕರ್ನಾಟಕ
ದೂರವಾಣಿ: +91 80 6824 3333 ಫ್ಯಾಕ್ಸ್: +91 80 6824 3001
corporateaffairs@teamlease.com | https://group.teamlease.com/
TeamLease® Putting India to Work

ಅಂಚೆ ಮತದಾನ ಸೂಚನೆ, ರಿಮೋಟ್ ಇ-ಮತದಾನ ವಿವರಗಳು ಮತ್ತು ಅಂತಿಮ ದಿನಾಂಕ

1. ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 108 ಮತ್ತು 110ರ ನಿಬಂಧನೆಗಳು; ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20 ಮತ್ತು 22 (ತಿದ್ದುಪಡಿಗೊಂಡಂತೆ - ‘ನಿಯಮಗಳು’ ಮತ್ತು ಅವುಗಳ ಅಡಿಯಲ್ಲಿ ಕಾಲಕಾಲಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರು-ಜಾರಿಗಳನ್ನು ಒಳಗೊಂಡಂತೆ); ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅವಶ್ಯಕತೆಗಳ) ನಿಯಮಾವಳಿಗಳು, 2015ರ ನಿಯಮಾವಳಿ 44 (ಸೆಬಿ ಲಿಸ್ಟಿಂಗ್ ನಿಯಮಾವಳಿಗಳು); ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಕುರಿತಾದ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್ (ಎಸ್‌ಎಸ್-2); ಹಾಗೂ ಇತರ ಅನ್ವಯವಾಗುವ ಕಾನೂನುಗಳು ಮತ್ತು ನಿಯಮಾವಳಿಗಳ ಅನ್ವಯ; ಜೊತೆಗೆ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ಸಾಮಾನ್ಯ ಸುತ್ತೋಲೆಗಳಾದ ದಿನಾಂಕ 08 ಏಪ್ರಿಲ್ 2020ರ 14/2020, 13 ಏಪ್ರಿಲ್ 2020ರ 17/2020, 05 ಮೇ 2020ರ 20/2020, 15 ಜೂನ್ 2020ರ 22/2020, 28 ಸೆಪ್ಟೆಂಬರ್ 2020ರ 33/2020, 31 ಡಿಸೆಂಬರ್ 2020ರ 39/2020, 23 ಜೂನ್ 2021ರ 10/2021, 08 ಡಿಸೆಂಬರ್ 2021ರ 20/2021, 05 ಮೇ 2022ರ 03/2022, 28 ಡಿಸೆಂಬರ್ 2022ರ 11/2022, 25 ಸೆಪ್ಟೆಂಬರ್ 2023ರ 09/2023, 19 ಸೆಪ್ಟೆಂಬರ್ 2024ರ 09/2024 ಮತ್ತು 22 ಸೆಪ್ಟೆಂಬರ್ 2025ರ 03/2025 ಹಾಗೂ ಸೆಬಿ ಹೊರಡಿಸಿರುವ ಅಕ್ಟೋಬರ್ 03, 2024 ರ ದಿನಾಂಕದ SEBI/HO/CFD/CFD-PoD-2/P/ CIR/2024/133 ಸುತ್ತೋಲೆ (ಇನ್ನು ಮುಂದೆ ಇವುಗಳನ್ನು ಒಟ್ಟಾಗಿ “ಸುತ್ತೋಲೆಗಳು” ಎಂದು ಉಲ್ಲೇಖಿಸಲಾಗಿದೆ) ಅನ್ವಯ; ಮಂಗಳವಾರ ಆಗಸ್ಟ್ 25, 2026 ರ ಅಂಚೆ ಮತದಾನ ಸೂಚನೆಯಲ್ಲಿ (**‘ಸೂಚನೆ’**) ವಿವರಿಸಲಾದ ನಿರ್ಣಯಗಳಿಗೆ ಸಂಬಂಧಿಸಿದಂತೆ, ಕೇವಲ ರಿಮೋಟ್ ಎಲೆಕ್ಟ್ರಾನಿಕ್ ಮತದಾನ ಪ್ರಕ್ರಿಯೆಯ (**‘ರಿಮೋಟ್ ಇ-ವೋಟಿಂಗ್’**) ಮೂಲಕ ವಿಶೇಷ ನಿರ್ಣಯಗಳನ್ನು ಅಂಗೀಕರಿಸುವ ಮೂಲಕ ಅನುಮೋದನೆ ಪಡೆಯಲು **ಟೀಮ್‌ಲೀಸ್ ಸರ್ವಿಸಸ್ ಲಿಮಿಟೆಡ್** (**‘ಕಂಪನಿ’**) ನ ಷೇರುದಾರರು ಅಥವಾ ಸದಸ್ಯರಿಗೆ (**‘ಸದಸ್ಯರಿಗೆ’**) ನೀಡಿರುವ ಸೂಚನೆ.

ಕ್ರ. ಸಂ.	ನಿರ್ಣಯ(ಗಳ) ವಿವರ	ನಿರ್ಣಯ(ಗಳ) ಬಗೆ
1.	‘ಟೀಮ್‌ಲೀಸ್ ಸರ್ವಿಸಸ್ ಲಿಮಿಟೆಡ್ ಎಂಪ್ಲಾಯಿ ಸ್ಟಾಕ್ ಆಪ್ಷನ್ಸ್ ಅಂಡ್ ರೆಸ್ಟ್ರಿಕ್ಟೆಡ್ ಸ್ಟಾಕ್ ಯೂನಿಟ್ಸ್ ಸ್ಕೀಮ್ 2026’ ಅನ್ನು ಅಳವಡಿಸಿಕೊಳ್ಳುವ ಬಗೆ.	ವಿಶೇಷ
2.	‘ಟೀಮ್‌ಲೀಸ್ ಸರ್ವಿಸಸ್ ಲಿಮಿಟೆಡ್ ಎಂಪ್ಲಾಯಿ ಸ್ಟಾಕ್ ಆಪ್ಷನ್ಸ್ ಅಂಡ್ ರೆಸ್ಟ್ರಿಕ್ಟೆಡ್ ಸ್ಟಾಕ್ ಯೂನಿಟ್ಸ್ ಸ್ಕೀಮ್ 2026’ ಅಡಿಯಲ್ಲಿ ಕಂಪನಿಯ ಅಂಗಸಂಸ್ಥೆ(ಗಳ) ಉದ್ಯೋಗಿಗಳು/ ನಿರ್ದೇಶಕರಿಗೆ ‘ಟೀಮ್‌ಲೀಸ್ ಸರ್ವಿಸಸ್ ಲಿಮಿಟೆಡ್ ಎಂಪ್ಲಾಯಿ ಸ್ಟಾಕ್ ಆಪ್ಷನ್ಸ್ ಅಂಡ್ ರೆಸ್ಟ್ರಿಕ್ಟೆಡ್ ಸ್ಟಾಕ್ ಯೂನಿಟ್ಸ್ ಸ್ಕೀಮ್ 2026’ ಅನ್ನು ಮಂಜೂರು ಮಾಡಲು ಅನುಮೋದನೆ ನೀಡುವುದು; ಈ ಮಂಜೂರಾತಿಯು ಐಟಂ ಸಂಖ್ಯೆ 1ರ ಅಡಿಯಲ್ಲಿ ಅನುಮೋದಿಸಲಾದ ಒಟ್ಟಾರೆ ಮಿತಿಯ ಒಳಗೇ ಇರತಕ್ಕದ್ದು ಮತ್ತು ಅದಕ್ಕೆ ಹೆಚ್ಚುವರಿಯಾಗಿರುವುದಿಲ್ಲ	ವಿಶೇಷ

2. ಮೇಲೆ ಹೇಳಿರುವಂತಹ ಸುತ್ತೋಲೆಗಳ ಪ್ರಕಾರ ಯಾರೆಲ್ಲ ಷೇರುದಾರರು ತಮ್ಮ ಇಮೇಲ್ ಐಡಿಗಳನ್ನು ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಮಧ್ಯವರ್ತಿಗಳಲ್ಲಿ/ಕಂಪನಿಯಲ್ಲಿ/ಡಿಪಾಸಿಟರಿ ಪಾರ್ಟಿಸಿಪೆಂಟರಲ್ಲಿ ನೋಂದಾಯಿಸಿಕೊಂಡಿರುವರೋ ಮತ್ತು ಬುಧವಾರ ಸೆಪ್ಟೆಂಬರ್ 30, 2026 (**‘ಅಂತಿಮ ದಿನಾಂಕ’**) ರಂದು ಯಾರೆಲ್ಲರ ಹೆಸರುಗಳು ಸದಸ್ಯರ ರಿಜಿಸ್ಟರಿನಲ್ಲಿ/ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಕಂಡುಬರುತ್ತವೆಯೋ ಅಂತಹ ಷೇರುದಾರರಿಗೆಲ್ಲ ಅಂಚೆ ಮತದಾನ ಸೂಚನೆಯ ವಿದ್ಯುನ್ಮಾನ ಪ್ರತಿಗಳನ್ನು ಕಳುಹಿಸಲಾಗಿದೆ. ಕಂಪನಿಯು ಸದರಿ ಅಂಚೆ ಮತದಾನ ಸೂಚನೆಯ ವಿದ್ಯುನ್ಮಾನ ಪ್ರತಿಗಳನ್ನು ರವಾನಿಸುವ ಕೆಲಸ ಬುಧವಾರ, ಅಕ್ಟೋಬರ್ 07, 2026 ರಂದು ಪೂರ್ಣಗೊಂಡಿದೆ.

3. ಸೆಬಿ ಲಿಸ್ಟಿಂಗ್ ನಿಬಂಧನೆಗಳ ನಿಬಂಧನೆ 44, ಎಂಸಿಎ ಸುತ್ತೋಲೆಗಳು ಮತ್ತು ಸದರಿ ಕಾಯಿದೆಯ ನಿಬಂಧನೆಗಳ ಮತ್ತು ಅವುಗಳ ಅಡಿಯಲ್ಲಿ ರಚಿಸಿರುವ, ಸಂಬಂಧಪಟ್ಟ ನಿಯಮಗಳ ಅನ್ವಯ, ಅಂತಿಮ ದಿನಾಂಕವಾದ ಬುಧವಾರ ಸೆಪ್ಟೆಂಬರ್ 30, 2026 ರಂದು, ಭೌತಿಕ ಅಥವಾ ಡಿಮ್ಯಾಟ್ ಸ್ವರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ, ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ವ್ಯವಹಾರಗಳ ಬಗ್ಗೆ ತಮ್ಮ ಮತಗಳನ್ನು ಚಲಾಯಿಸಲು ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುವ ಸಲುವಾಗಿ ಕಂಪನಿಯು, ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (KFintech) ಕಂಪನಿಯ ಸೇವೆಗಳನ್ನು ನಿಯೋಜಿಸಿಕೊಂಡಿದೆ.

I. ಸದಸ್ಯರ / ಫಲಾನುಭವಿ ಮಾಲೀಕರ ಮತದಾನದ ಹಕ್ಕುಗಳು ಅಂತಿಮ ದಿನಾಂಕವಾದ ಬುಧವಾರ ಸೆಪ್ಟೆಂಬರ್ 30, 2026 ರಂದು ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದಲ್ಲಿರುವ ಅವರವರ ಇಕ್ವಿಟಿ ಷೇರುಗಳ ಅನುಪಾತಗಳಲ್ಲಿ ಇರುತ್ತವೆ. ಅಂತಿಮ ದಿನಾಂಕದಂದು ಸದಸ್ಯರ ರಿಜಿಸ್ಟರ್ / ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರಿರುವ ಸದಸ್ಯರು ಮಾತ್ರವೇ ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಅಂತಿಮ ದಿನಾಂಕದಂದು ಸದಸ್ಯರಲ್ಲದ ಯಾವುದೇ ವ್ಯಕ್ತಿಗೆ ಈ ಸೂಚನೆ ದೊರೆತಿದ್ದರೆ ಅದನ್ನು ತಮ್ಮ ಮಾಹಿತಿಗಾಗಿ ಎಂದಷ್ಟೇ ತಿಳಿಯಬೇಕು.

II. ಇ-ವೋಟಿಂಗ್ ಸೌಲಭ್ಯ ಇಲ್ಲಿ ಕೆಳಗೆ ತಿಳಿಸಿರುವ ವೋಟಿಂಗ್ ಅವಧಿಯಲ್ಲಿ ಮಾತ್ರವೇ ಲಭ್ಯವಿರುತ್ತದೆ:

ಇ-ವೋಟಿಂಗ್ ಪ್ರಾರಂಭ	ಇ-ವೋಟಿಂಗ್ ಮುಕ್ತಾಯ
ಅಕ್ಟೋಬರ್ 08, 2026, ಭಾ.ಕಾ. ಬೆಳಿಗ್ಗೆ 09:00	ನವೆಂಬರ್ 06, 2026, ಭಾ.ಕಾ. ಸಂಜೆ 05:00

III. ರಿಮೋಟ್ ಇ-ವೋಟಿಂಗ್ ಮಾಡ್ಯೂಲನ್ನು ಶುಕ್ರವಾರ, 6 ನವೆಂಬರ್ 2026, ಭಾರತೀಯ ಕಾಲಮಾನ ಸಂಜೆ 05.00 ರ ನಂತರ ನಿಷ್ಕ್ರಿಯಗೊಳಿಸಲಾಗುತ್ತದೆ / ಬ್ಲಾಕ್ ಮಾಡಲಾಗುತ್ತದೆ. ಷೇರುದಾರರು ಒಮ್ಮೆ ಒಂದು ನಿರ್ಣಯದ ಮೇಲೆ ಮತವನ್ನು ಚಲಾಯಿಸಿದ ನಂತರ ಮತ್ತೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.

IV. ಸದಸ್ಯರಲ್ಲಿ ವಿನಂತಿ: ಒಂದೊಮ್ಮೆ ತಮ್ಮ ಇಮೇಲ್ ಐಡಿಗಳಲ್ಲಿ ಏನಾದರೂ ಬದಲಾವಣೆ ಆಗಿದ್ದರೆ: (ತಮ್ಮ ಷೇರುಗಳು ಎಲೆಕ್ಟ್ರಾನಿಕ್ ರೂಪದಲ್ಲಿದ್ದರೆ) ಅದನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟರಿಗೆ, ಅಥವಾ (ಅವರ ಷೇರುಗಳು ಭೌತಿಕ ರೂಪದಲ್ಲಿದ್ದರೆ) ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ರಿಗೆ ಅಂದರೆ, ಕೆಫಿನ್‌ಟೆಕ್ ಗೆ ತಿಳಿಸಬೇಕು.

4. ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯ ಮೂಲಕ ನಡೆಯುವ ಅಂಚೆ ಮತದಾನ ನ್ಯಾಯವಾಗಿ ಮತ್ತು ಪಾರದರ್ಶಕವಾಗಿ ನಡೆಯುವಂತೆ ನೋಡಿಕೊಳ್ಳಲು ಕಂಪನಿಯು ಶ್ರೀ ಮುಖೇಶ್ ಸಿರೋಯಾ, ಎಂ ಸಿರೋಯಾ ಮತ್ತು ಕಂಪನಿ, ವೃತ್ತಿಪರ ಕಂಪನಿ ಕಾರ್ಯದರ್ಶಿಗಳು (ಎಫ್‌ಸಿಎಸ್: 5682, ಸಿಪಿ: 4157), ಮುಂಬೈ ಇವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿಯೂ, ಮತ್ತು ಪರ್ಯಾಯ ಸೂಕ್ಷ್ಮ ಪರಿಶೀಲಕರನ್ನಾಗಿ ಭವ್ಯತಾ ಆಚಾರ್ (ಸಿಪಿ ಸಂ. 21758; ಸದಸ್ಯತ್ವ ಸಂ. ಎ25734) ಇವರನ್ನೂ ನೇಮಿಸಿಕೊಂಡಿದೆ. ಅಂಚೆ ಮತದಾನದ ಫಲಿತಾಂಶಗಳನ್ನು ಮಂಗಳವಾರ, ನವೆಂಬರ್ 10, 2026 ರಂದು ಅಥವಾ ಅದಕ್ಕೆ ಮೊದಲೇ ಪ್ರಕಟಿಸಲಾಗುತ್ತದೆ. ಅಂಚೆ ಮತದಾನದ ಫಲಿತಾಂಶಗಳನ್ನು ಕಂಪನಿಯ https://group.teamlease.com/, ಮತ್ತು ಕೆಫಿನ್‌ಟೆಕ್ https://evoting.kintech.com ವೆಬ್‌ಸೈಟ್ ಗಳಲ್ಲಿ ಹಾಕಲಾಗುತ್ತದೆ; ಜೊತೆಗೆ ಕಂಪನಿಯಷೇರುಗಳನ್ನು ಪಟ್ಟಿ ಮಾಡಿರುವ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೂ ತಿಳಿಸಲಾಗುವುದು.

5. ಇ-ವೋಟಿಂಗ್‌ಗೆ ಸಂಬಂಧಿಸಿದ ಸೂಚನೆಗಳ ಸಹಿತವಾದ ಅಂಚೆ ಮತದಾನದ ಸೂಚನೆಯನ್ನು ಕಂಪನಿಯ https://group.teamlease.com/ ಮತ್ತು ಕೆಫಿನ್‌ಟೆಕ್‌ನ https://evoting.kfintech.com ವೆಬ್‌ಸೈಟ್ ಗಳಲ್ಲಿ ಹಾಕಲಾಗುತ್ತದೆ ಮತ್ತು ಕಂಪನಿಯ ಇಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್, ಮತ್ತು ಬಿಎಸ್‌ಇ ಲಿಮಿಟೆಡ್ http://www.nseindia.com ಮತ್ತು http://www.bseindia.com ವೆಬ್‌ಸೈಟುಗಳಲ್ಲಿ, ಸಂಬಂಧಿತ ವಿಭಾಗಗಳಲ್ಲೂ ಲಭ್ಯವಿರುತ್ತದೆ.

6. ಇ-ವೋಟಿಂಗ್ ಮೂಲಕ ನಡೆಯುವ ಅಂಚೆ ಮತದಾನಕ್ಕೆ ಸಂಬಂಧಿಸಿದಂತೆ ಯಾವುದೇ ದೂರುಗಳನ್ನು ಕಂಪನಿ ಕಾರ್ಯದರ್ಶಿಗಳಾದ ಅಲಕಾ ಚಂದ ಅವರಿಗೆ ತಿಳಿಸಬಹುದು. ವಿಳಾಸ: ಇನ್ಫಿನಿಕ್ಸ್ ಸ್ಕ್ವೇರ್, ಬಿ-4, ಬಿ-5, ಬಿ 6, ಎಚ್‌ಎಎಲ್ ಇಂಡಸ್ಟ್ರಿಯಲ್ ಎಸ್ಟೇಟ್, ಎಚ್‌ಎಎಲ್ ಜಿಬಿ ಕ್ವಾರ್ಟರ್ಸ್, ವಿಭೂತಿಪುರ, ಬೆಂಗಳೂರು 560037, ಕರ್ನಾಟಕ, ದೂರವಾಣಿ: +91 80 6824 3333 ಅಥವಾ ಇ-ಮೇಲ್: corporateaffairs@teamlease.com.

7. ಎಲೆಕ್ಟ್ರಾನಿಕ್ ವೋಟಿಂಗ್ ಬಗ್ಗೆ ಏನಾದರೂ ಪ್ರಶ್ನೆಗಳಿದ್ದರೆ ಮತ್ತು/ಅಥವಾ ದೂರುದುಮ್ಮಾನಗಳಿದ್ದರೆ ಷೇರುದಾರರು ಕೆಫಿನ್‌ಟೆಕ್ ವೆಬ್‌ಸೈಟ್ https://evoting.kintech.com (ಕೆಫಿನ್‌ಟೆಕ್ ವೆಬ್‌ಸೈಟ್) ನಲ್ಲಿರುವ ಸಹಾಯ ಮತ್ತು ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು’ (FAQs) ವಿಭಾಗವನ್ನು ಮತ್ತು ಅದರಲ್ಲಿ ಡೌನ್‌ಲೋಡ್ ವಿಭಾಗದಲ್ಲಿರುವ ಇ-ವೋಟಿಂಗ್ ಯೂಸರ್ ಮ್ಯಾನ್ಯುಯಲ್ ನೋಡಬಹುದು ಅಥವಾ ಕೆಫಿನ್‌ಟೆಕ್, ಕಾರ್ವಿ ಸೆಲೆನಿಯಮ್ ಟವರ್ ಬಿ, ಪ್ಲಾಟ್ 31-32, ಗಚ್ಚಿಬೌಲಿ, ಫೈನಾನ್ಶಿಯಲ್ ಡಿಸ್ಟ್ರಿಕ್ಟ್, ನಾನಾಕ್ರಮಗುಡ, ಹೈದರಾಬಾದ್-500032 ಈ ವಿಳಾಸದಲ್ಲಿ ಶ್ರೀ ರತ್ನ ಬಾಬು ವಾಗೋಲು / ಶ್ರೀ ಪ್ರೇಮಕುಮಾರ್ ನಾಯರ್ (ಯೂನಿಟ್: ಟೀಮ್‌ಲೀಸ್ ಸರ್ವಿಸಸ್ ಲಿಮಿಟೆಡ್) ರನ್ನು ಸಂಪರ್ಕಿಸಿ ಅಥವಾ einward.ris@kfintech.com ಗೆ ಇಮೇಲ್ ಮಾಡಿ ಅಥವಾ ಕೆಫಿನ್‌ಟೆಕ್ ನ ಶುಲ್ಕರಹಿತ ಸಂಖ್ಯೆ 1-800- 309-4001 ಗೆ ಕರೆ ಮಾಡಿ ಅಗತ್ಯವಾದ ಸ್ಪಷ್ಟೀಕರಣಗಳನ್ನು ಪಡೆದುಕೊಳ್ಳಬಹುದು.

ಟೀಮ್‌ಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/-
ಅಲಕಾ ಚಂದ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
(M. No. F10911)

ಸ್ಥಳ: ಬೆಂಗಳೂರು
ದಿನಾಂಕ: ಅಕ್ಟೋಬರ್ 07, 2026

ನಾರ್ಥ್ ಸೆಂಟ್ರಲ್ ರೈಲ್ವೆ

ಇ-ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು (ಕಾಮಗಾರಿ) ನಾರ್ಥ್ ಸೆಂಟ್ರಲ್ ರೈಲ್ವೆ, ಝಾನ್ಸಿ ಇವರು, ಕೆಳಕಂಡ ಕಾಮಗಾರಿಗಾಗಿ ಆನ್‌ಲೈನ್ ಮುಖಾಂತರ ಮೊಹರಾದ “ಬಹಿರಂಗ ಟೆಂಡರ್” ಆಹ್ವಾನಿಸಿದ್ದಾರೆ.

ಇ-ಟೆಂಡರ್ ನಂ.: ಜೆಎಚ್‌ಎಸ್–ಇಂಜಿಂಗ್–ಸಿ–2026–212	ಅಂದಾಜು ವೆಚ್ಚ: ರೂ. 30008187.60
ಕಾಮಗಾರಿಯ ವಿವರ: ಎಡಿಇಎನ್/ಎಲ್ಎಆರ್ ವ್ಯಾಪ್ತಿ ಅಡಿಯಲ್ಲಿನ ತಲಬೆಹತ್ ನಿಲ್ದಾಣದಲ್ಲಿ ರಿಪ್ಲೇಸ್‌ಮೆಂಟ್ ಅಕೌಂಟ್ ಆಧಾರದ ಮೇರೆಗೆ ಟೈಪ್ II ಕ್ವಾರ್ಟರ್ಸ್‌ನ 16 ಯೂನಿಟ್‌ಗಳ ನಿರ್ಮಾಣ.	
ಭದ್ರತಾ ಠೇವಣಿ: ರೂ. 600200.00	ಟೆಂಡರ್ ಕ್ಲೋಸಿಂಗ್ ದಿನಾಂಕ: 02.11.2026, 15:00 ಗಂಟೆ.
ಪೂರ್ಣಗೊಳಿಸುವ ಅವಧಿ/ಸ್ವೀಕೃತಿ ಪತ್ರ ನೀಡಿದ ಅವಧಿಯಿಂದ: 12 ತಿಂಗಳು.	

- ದಿನಾಂಕ 02.11.2026 ರಂದು 15:00 ಗಂಟೆವರೆಗೆ ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬಹುದು.
- ಸಂಪೂರ್ಣ ವಿವರಗಳಿಗಾಗಿ ಮತ್ತು ಬಿಡ್ ಸಲ್ಲಿಕೆಗಾಗಿ ದಯವಿಟ್ಟು ಭಾರತೀಯ ರೈಲ್ವೆಯ www.ireps.gov.in ವೆಬ್‌ಸೈಟ್ ಪರಿಶೀಲಿಸಿರಿ.

2279/26(AK)

North central railways | @CPRONCR | www.ncr.indianrailways.gov.in

ಕೇಂದ್ರೀಯ ಯೋಗ ಮತ್ತು ನಿಸರ್ಗ ಚಿಕಿತ್ಸೆ ಸಂಶೋಧನಾ ಪರಿಷತ್
(ಆಯುಷ್ ಸಚಿವಾಲಯ, ಭಾರತ ಸರ್ಕಾರ)
CCRYN
61–65, ಇನ್‌ಸ್ಟಿಟ್ಯೂಷನಲ್ ಏರಿಯಾ, ಜನಕಪುರಿ, ನವದೆಹಲಿ–110058
ಫೋನ್: 011–28520430, 31, 32 ಇ–ಮೇಲ್: ccryn.goi@gmail.com
ವೆಬ್‌ಸೈಟ್: https://www.naturopathyday.in

ಟೆಂಡರ್ ಆಹ್ವಾನ ಪ್ರಕಟಣೆ

ಈ ಕೆಳಗಿನ ವಿವರಗಳಿಗೆ ಅನುಗುಣವಾಗಿ ಸಿಆರ್‌ಐವೈಎನ್ ರೋಹಿಣಿ (ದೆಹಲಿ), ಸಿಆರ್‌ಐವೈಎನ್ ಜಾಜ್ಜರ್ (ಹರ್ಯಾಣ) ಮತ್ತು ಸಿಆರ್‌ಐವೈಎನ್ ನಾಗಮಂಗಲ (ಕರ್ನಾಟಕ) ಇಲ್ಲಿರುವ ಕಚೇರಿಗಳಲ್ಲಿನ ತ್ಯಾಜ್ಯ ತೆರವು ಮತ್ತು ವಿಲೇವಾರಿಗಾಗಿ ಹಾಗೂ ಆಡಳಿತಾತ್ಮಕ ಪ್ರದೇಶ, ಹೊರಭಾಗದಲ್ಲಿನ ಖಾಲಿ ಜಾಗ, ಕಾಮನ್ ಏರಿಯಾ, ಗ್ರಂಥಾಲಯ ಸಮುಚ್ಚಯ, ಸಭಾಂಗಣಗಳಲ್ಲಿನ ನೈರ್ಮಲ್ಯ ನಿರ್ವಹಣಾ ಸೇವೆಗಳಿಗಾಗಿ ವಾರ್ಷಿಕ ಗುತ್ತಿಗೆ:

ಕ್ರ. ಸಂ.	ಟೆಂಡರ್ ಐ.ಡಿ ನಂಬರ್	ಸ್ಥಳ
1.	2026_ಸಿಸಿಆರ್‌ವೈಎನ್_928280_1	ಸಿಆರ್‌ಐವೈಎನ್ ರೋಹಿಣಿ (ದೆಹಲಿ), ಸಿಆರ್‌ಐವೈಎನ್ ಜಾಜ್ಜರ್ (ಹರ್ಯಾಣ) ಮತ್ತು ಸಿಆರ್‌ಐವೈಎನ್ ನಾಗಮಂಗಲ (ಕರ್ನಾಟಕ)

ಸಿಪಿಪಿ ಪೋರ್ಟಲ್ ಹಾಗೂ ಪರಿಷತ್‌ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುವ ಸಿಆರ್‌ಐವೈಎನ್‌ನ ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಲಾಗಿರುವ ಷರತ್ತು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ, ಸಿಆರ್‌ಐವೈಎನ್ ರೋಹಿಣಿ (ದೆಹಲಿ), ಸಿಆರ್‌ಐವೈಎನ್ ಜಾಜ್ಜರ್ (ಹರ್ಯಾಣ) ಮತ್ತು ಸಿಆರ್‌ಐವೈಎನ್ ನಾಗಮಂಗಲ (ಕರ್ನಾಟಕ) ಇಲ್ಲಿರುವ ಕಚೇರಿಗಳಲ್ಲಿನ ತ್ಯಾಜ್ಯ ತೆರವು ಮತ್ತು ವಿಲೇವಾರಿಗಾಗಿ ಹಾಗೂ ಆಡಳಿತಾತ್ಮಕ ಪ್ರದೇಶ, ಹೊರಭಾಗದಲ್ಲಿನ ಖಾಲಿ ಜಾಗ, ಕಾಮನ್ ಏರಿಯಾ, ಗ್ರಂಥಾಲಯ ಸಮುಚ್ಚಯ, ಸಭಾಂಗಣಗಳಲ್ಲಿನ ನೈರ್ಮಲ್ಯ ನಿರ್ವಹಣಾ ಸೇವೆಗಳನ್ನು ಪಡೆಯಲು ವಾರ್ಷಿಕ ಗುತ್ತಿಗೆಗಾಗಿ ಟೆಂಡರ್ ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಮತ್ತು ಅರ್ಹ ಟೆಂಡರ್‌ದಾರರು, ಟೆಂಡರ್ ದಸ್ತಾವೇಜುಗಳ ಮೇರೆಗಿನ ತಮ್ಮ ಬಿಡ್‌ಗಳನ್ನು 02.11.2026 ರಂದು ಬೆಳಗ್ಗೆ 11:00 ಗಂಟೆಯೊಳಗೆ ಸಲ್ಲಿಸಬಹುದು. ಮುಂದುವರಿದಂತೆ, ಸದರಿ ಟೆಂಡರ್‌ಗೆ ಬಿಡ್ ಸಲ್ಲಿಸುವ ವಿವರಗಳನ್ನು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು, ಸಿಪಿಪಿ ಪೋರ್ಟಲ್‌ನಲ್ಲಿರುವ ಟೆಂಡರ್ ಐ.ಡಿ. ನಂಬರ್ 2026_ಸಿಸಿಆರ್‌ವೈಎನ್_928280_1 ಮುಖೇನ ಮತ್ತು ಪರಿಷತ್‌ನ https://www.naturopathyday.in/ ವೆಬ್‌ಸೈಟ್‌ನ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಪರಿಷತ್‌ನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ನಿರ್ದೇಶಕರು, ಸಿಸಿಆರ್‌ವೈಎನ್
CBC 17205/11/0002/2627

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರ ಸೂಚನೆಗಳ ಪ್ರಕಾರ, **ಅಕ್ಕಲೇನಹಳ್ಳಿ – ಮಲ್ಲೇನಹಳ್ಳಿ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು** ವಿಳಾಸದಲ್ಲಿ ಸ್ಥಿತಗೊಂಡಿರುವ (1) **ಸರ್ವೆ ನಂ. 37/15 ರಲ್ಲಿರುವ 1 ಎಕರೆ, ಮತ್ತು (2) ಸರ್ವೆ ನಂ. 37/18** ರಲ್ಲಿರುವ **6 ಎಕರೆ 12 ಗುಂಟಾ** ವಿಸ್ತೀರ್ಣವುಳ್ಳ, ಒಂದಕ್ಕೊಂದು ಹೊಂದಿಕೊಂಡಂತಿರುವ, ಒಟ್ಟಾರೆ ಸುಮಾರು **7 ಎಕರೆ 12 ಗುಂಟಾ** ವಿಸ್ತೀರ್ಣವುಳ್ಳ ಕೆಳಕಂಡ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ **(“ಷೆಡ್ಯೂಲ್ ಪ್ರಾಪರ್ಟಿ”)** ಜಮೀನುಗಳಿಗೆ ಸಂಬಂಧಿಸಿದಂತೆ **ಶ್ರೀ ಎಂ.ಆರ್. ಜಾನಕಿರಾಮ್** ಬಿನ್ ಲೇಟ್ ಎಂ.ಎಸ್. ರಾಮಯ್ಯ ನವರ ಮಾಲೀಕತ್ವ, ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿಯನ್ನು ನಾವು ಪರಿಶೋಧಿಸುತ್ತಿದ್ದೇವೆ.

ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ, ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಗೆ ಅಡಮಾನ, ಈಡು, ಋಣಭಾರ, ಹಕ್ಕುಪತ್ರಗಳ ಠೇವಣೆ, ಅಡವು, ಮೇಲಾಧಾರ, ಹಂಚಿಕೆ, ಮಾರಾಟ, ಮಾರಾಟ ಒಪ್ಪಂದ, ವರ್ಗಾವಣೆ, ಅಸೈನ್‌ಮೆಂಟ್, ಭೋಗ್ಯ, ಭೋಗ್ಯ ಒಪ್ಪಂದ, ಉಪ ಭೋಗ್ಯ, ಉಪ ಭೋಗ್ಯ ಒಪ್ಪಂದ, ಬಾಡಿಗೆ, ಉಪ ಬಾಡಿಗೆ, ಲೈಸೆನ್ಸ್, ಸಬ್ ಲೈಸೆನ್ಸ್, ಲೀನ್, ಚಾರ್ಜ್, ಟ್ರಸ್ಟ್, ನಿರ್ವಹಣೆ, ಈಸ್‌ಮೆಂಟ್, ಪರಿಹಾರ ಕ್ಲೇಮ್‌ಗಳು, ಉಡುಗೊರೆ, ಲಿಸ್ಪೆಂಡೆನ್ಸ್, ವಿನಿಮಯ, ಪಾಲು, ಫಲಾನುಭವಿ ಹಿತಾಸಕ್ತಿ, ಸ್ವಾಧೀನ, ಬಿಡುಗಡೆ, ರಿಲಿಕ್ವಿಷ್‌ಮೆಂಟ್, ಭಾಗ, ಪವರ್ ಆಫ್ ಅಟಾರ್ನಿ, ಗುತ್ತಿಗೆ/ಒಡಂಬಡಿಕೆ, ಅಯ್ಕೆಗಳು, ಮೊದಲ ತಿರಸ್ಕಾರ ಹಕ್ಕು ಅಥವಾ ಮೊದಲ ಕೊಡುಗೆ ಹಕ್ಕು ಅಥವಾ ಮುಂಬರುವ ಹಕ್ಕು ಅಥವಾ ಋಣಭಾರ ಅಡಿಯಲ್ಲಿನ ಯಾವುದೇ ಸ್ವರೂಪದ ಉಯಿಲು, ಬಿಕ್ವೆಸ್ಟ್, ಆನುವಂಶಿಕ, ಸಕ್ಸೆಷನ್, ಎಫ್‌ಎಆರ್, ಎಫ್‌ಎಸ್‌ಐ, ಅಭಿವೃದ್ಧಿ ಹಕ್ಕುಗಳು, ವೃತ್ತಿ, ಪಾಲು, ಅಸೈನ್‌ಮೆಂಟ್, ಕುಟುಂಬ ಒಪ್ಪಂದಗಳು/ಇತ್ಯರ್ಥ ಅಥವಾ ಇತರ ಯಾವುದೇ ಕಾನೂನು ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಇನ್ಯಾವುದೇ ಕಂದಾಯ ಅಥವಾ ಶಾಸನಬದ್ಧ ಅಥವಾ ತೀರ್ಪು ನೀಡುವ ಪ್ರಾಧಿಕಾರ ಅಥವಾ ಆರ್ಬಿಟ್ರೇಶನ್ ಹೊರಡಿಸಿರುವ ಡಿಕ್ರೀ, ಪಾಲುದಾರಿಕೆ, ಸ್ವಾಧೀನತೆ, ಹಂಚಿಕೆ, ವ್ಯಾಜ್ಯ, ಆದೇಶ, ಡಿಕ್ರಿ, ಅವಾರ್ಡ್, ನಿರ್ದೇಶನ, ಮಧ್ಯಂತರ ತಡೆ, ಅಟ್ಯಾಚ್‌ಮೆಂಟ್ ಅಥವಾ ಸರ್ಕಾರಿ ಅಥವಾ ಯಾವುದೇ ಸಂಸ್ಥೆಯ ಸ್ವಾಧೀನತೆ, ನಿರ್ಬಂಧ ಅಥವಾ ಇನ್ಯಾವುದೇ ಅಡಚಣೆಗಳಿದ್ದಲ್ಲಿ ಅಥವಾ ಇನ್ಯಾವುದೇ ಒಪ್ಪಂದ, ಡೀಡ್, ದಾಖಲಾತಿ ಅಥವಾ ಪವರ್ ಆಫ್ ಅಟಾರ್ನಿ ಅಥವಾ ಇನ್ನಿತರ ಯಾವುದೇ ವಿಧಾನದಲ್ಲಿ **(“ಕ್ಲೇಮ್”)** ಅಥವಾ ಈಗಾಗಲೇ ಯಾವುದಾದರು ದಾವೆ, ವ್ಯಾಜ್ಯ, ತಗಾದೆ, ಮೇಲ್ಮನವಿ ಹೂಡಿದ್ದಲ್ಲಿ ಅಥವಾ ಇತರೆ ಪ್ರೊಸೀಡಿಂಗ್‌ಗಳಿದ್ದಲ್ಲಿ ಅಥವಾ ಯಾವುದೇ ಡಿಮಾಂಡ್ ನೋಟಿಸ್ ಜಾರಿಗೊಳಿಸಿದ್ದಲ್ಲಿ ಅಥವಾ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ಡಿಕ್ರಿ, ತೀರ್ಪು, ಆದೇಶ, ತಡೆಯಾಜ್ಞೆ, ಅಟ್ಯಾಚ್‌ಮೆಂಟ್, ನಿರ್ದೇಶನ ಜಾರಿಯಾಗಿದ್ದಲ್ಲಿ, ಇಂತಹವುಗಳಷ್ಟೆ ಅಲ್ಲದೆ ಇನ್ಯಾವುದೇ ಸ್ವರೂಪದ ಅಡಿಯಲ್ಲಿ ಯಾರಿಗಾದರು ಕ್ಲೇಮ್‌ಗಳಿದ್ದಲ್ಲಿ ಅಥವಾ ಯಾವುದೇ ಡಿಮಾಂಡ್‌ಗಳಿದ್ದಲ್ಲಿ ಮತ್ತು/ಅಥವಾ ಆಕ್ಷೇಪಣೆಗಳಿದ್ದಲ್ಲಿ ಮತ್ತು/ಅಥವಾ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಎಸ್ಟೇಟ್ ಹೊಂದಿದ್ದಲ್ಲಿ, ಅಂತಹವರು ತಮ್ಮ ಯಾವುದೇ ಕ್ಲೇಮ್‌ಗಳ ಅಥವಾ ಆಕ್ಷೇಪಣೆಗಳ ವಿವರಗಳನ್ನು, ತಮ್ಮ ಕ್ಲೇಮ್ ಅಥವಾ ಆಕ್ಷೇಪಣೆಗಳನ್ನು ಪುರಸ್ಕರಿಸಬಲ್ಲ ಅಗತ್ಯ ಪುರಾವೆ ದಾಖಲಾತಿಗಳ ಸಮೇತ, ಕೆಳಕಂಡ ವಿಳಾಸದಲ್ಲಿರುವ ಕೆಳಗಿನ ಸಹಿದಾರರಿಗೆ, ಈ ಪ್ರಕಟಣೆಯ ದಿನಾಂಕದಿಂದ **15 (ಹದಿನೈದು) ದಿನಗಳೊಳಗೆ,** ಲಿಖಿತ ರೂಪದಲ್ಲಿ ಮಾಹಿತಿ ನೀಡಬೇಕೆಂದು ಈ ಮೂಲಕ ಕರೆ ನೀಡುತ್ತಿದ್ದೇವೆ, ಇದಕ್ಕೆ ತಪ್ಪಿದಲ್ಲಿ, **ಶ್ರೀ ಎಂ.ಆರ್. ಜಾನಕಿರಾಮ್** ಬಿನ್ ಲೇಟ್ ಎಂ.ಎಸ್. ರಾಮಯ್ಯ ಎಂಬುವರೇ ಸದರಿ ಷೆಡ್ಯೂಲ್ ಪ್ರಾಪರ್ಟಿಯ ಸಂಪೂರ್ಣ ಮಾಲೀಕರಾಗಿದ್ದಾರೆ ಮತ್ತು ಮಾರಾಟ ಹಕ್ಕುಗಳನ್ನು ಹೊಂದಿದ್ದಾರೆ ಹಾಗೂ ಸದರಿ ಷೆಡ್ಯೂಲ್ ಪ್ರಾಪರ್ಟಿಯು ಯಾವುದೇ ಮತ್ತು ಎಲ್ಲಾ ಋಣಭಾರಗಳಿಂದ ಮುಕ್ತವಾಗಿದೆ ಎಂದು ಪರಿಗಣಿಸಲಾಗುತ್ತದೆ, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯ ಅಥವಾ ಪಕ್ಷಗಾರರ ಯಾವುದೇ ಕ್ಲೇಮ್‌ಗಳು ಇರುವುದಿಲ್ಲವೆಂದು ಪರಿಭಾವಿಸಲಾಗುತ್ತದೆ ಮತ್ತು ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿ ಅಥವಾ ಪ್ರಾಪರ್ಟಿಯ ಯಾವುದೇ ಭಾಗದ ಮೇಲೆ ಯಾವುದೇ ಕ್ಲೇಮ್‌ಗಳು, ಆಕ್ಷೇಪಣೆಗಳು ಇರುವುದಿಲ್ಲವೆಂದು ಭಾವಿಸುತ್ತಾ, ಸದರಿ ಷೆಡ್ಯೂಲ್ ಪ್ರಾಪರ್ಟಿಯನ್ನು ಅದರ ಪ್ರಸ್ತುತ ಮಾಲೀಕರಾದ **ಶ್ರೀ ಎಂ.ಆರ್. ಜಾನಕಿರಾಮ್** ಇವರಿಂದ ನೇರವಾಗಿ ಖರೀದಿಸುವ ತಮ್ಮ ಉದ್ದೇಶವನ್ನು ಪೂರ್ಣಗೊಳಿಸಿಕೊಳ್ಳಲು ಮುಂದಾಗುತ್ತಾರೆ. ಆದಾಗ್ಯೂ, ಒಂದು ವೇಳೆ ಮೇಲ್ಕಂಡ ನಿಗದಿತ ಅವಧಿಯ ನಂತರದಲ್ಲಿ ಅಂತಹ ಯಾವುದೇ ಕ್ಲೇಮ್‌ಗಳು ಅಥವಾ ಆಕ್ಷೇಪಣೆಗಳು ಎದುರಾದಲ್ಲಿ, ಅಂತಹವುಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸುವುದಿಲ್ಲ. ಸದರಿ ಷೆಡ್ಯೂಲ್ ಪ್ರಾಪರ್ಟಿಯ ಹಕ್ಕುಗಳು ಸ್ಪಷ್ಟವಾಗಿವೆ ಮತ್ತು ಖರೀದಿ ಮಾರಾಟಕ್ಕೆ ಯೋಗ್ಯವಾಗಿವೆ ಹಾಗೂ ಯಾವುದೇ ಋಣಭಾರ, ಕ್ಲೇಮ್‌ಗಳಿಂದ, ವ್ಯಾಜ್ಯಗಳಿಂದ ಮತ್ತು/ಅಥವಾ ಯಾವುದೇ ರೀತಿಯ ಅನುಮಾನಗಳಿಂದ ಮುಕ್ತವಾಗಿದೆ ಎಂದು ಪರಿಭಾವಿಸಲಾಗುತ್ತದೆ ಮತ್ತು ಪರಿಗಣಿಸಲಾಗುತ್ತದೆ.

ಷೆಡ್ಯೂಲ್
(ಷೆಡ್ಯೂಲ್ ಪ್ರಾಪರ್ಟಿಯ ವಿವರ)

ಅಕ್ಕಲೇನಹಳ್ಳಿ – ಮಲ್ಲೇನಹಳ್ಳಿ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುವ (1) **ಸರ್ವೆ ನಂ. 37/15 ರಲ್ಲಿರುವ 1 ಎಕರೆ,** ಮತ್ತು (2) **ಸರ್ವೆ ನಂ. 37/18 ರಲ್ಲಿನ 6 ಎಕರೆ 12 ಗುಂಟಾ** ವಿಸ್ತೀರ್ಣವುಳ್ಳ, ಒಂದಕ್ಕೊಂದು ಹೊಂದಿಕೊಂಡಂತಿರುವ, ಒಟ್ಟಾರೆ ಸುಮಾರು **7 ಎಕರೆ 12 ಗುಂಟಾ** ವಿಸ್ತೀರ್ಣವುಳ್ಳ ಜಮೀನುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಜಮೀನುಗಳ ಚಕ್ಕುಬಂದಿ ಕೆಳಗಿನಂತಿರುತ್ತದೆ:

ಉತ್ತರ : ಸರ್ವೆ ನಂ. 37/18 ಮತ್ತು 37/15 ರಲ್ಲಿರುವ ಎಂ.ಆರ್. ಸಂಪಂಗಿರಾಮಯ್ಯ ನವರಿಗೆ ಹಂಚಿಕೆಯಾಗಿರುವ ಭಾಗ;
ದಕ್ಷಿಣ : ರಸ್ತೆ;
ಪೂರ್ವ : ಸರ್ವೆ ನಂ. 37/15 ರಲ್ಲಿನ ಉಳಿಕೆ ಭಾಗ; **ಮತ್ತು**
ಪಶ್ಚಿಮ : ಸರ್ವೆ ನಂ. 37/21 ರಲ್ಲಿರುವ ಸ್ವತ್ತು.

ದಿನಾಂಕ :08–10–2026
ಸ್ಥಳ: ಬೆಂಗಳೂರು

ಹರ್ಷ ಸುಧೀಂದ್ರ, ಪಾರ್ಟ್ನರ್
ಸಿರಿಲ್ ಅಮರ್ಚಂದ್ ಮಂಗಲದಾಸ್
ವಕೀಲರು ಮತ್ತು ಸಾಲಿಸಿಟರ್ಸ್
ಪ್ರೆಸ್ಟೀಜ್ ಫಾಲ್ಕನ್ ಟವರ್, 3ನೇ ಮಹಡಿ, ಬ್ರಂಟನ್ ರಸ್ತೆ, ಎಂ.ಜಿ. ರಸ್ತೆ ಪಕ್ಕ
ಬೆಂಗಳೂರು – 560 025. ಫೋನ್ ನಂ.: 080 6792 2000

ಬ್ಯೂರೋ ಆಫ್ ಪೊಲೀಸ್ ರಿಸರ್ಚ್ & ಡೆವಲಪ್‌ಮೆಂಟ್
ಗೃಹ ವ್ಯವಹಾರಗಳ ಸಚಿವಾಲಯ
ಭಾರತ ಸರ್ಕಾರ
ರಾಹೆ–48, ಮಹಿಪಾಲಪುರ ನವದೆಹಲಿ–110037
ನಂ. 32/10/2026–ಆರ್‌ಡಿ/ಬಿಪಿಆರ್&ಡಿ (ಇ–23985)

ಬಿಪಿಆರ್&ಡಿ ರಿಸರ್ಚ್ ಪ್ರೋಗ್ರಾಮ್‌ಗಾಗಿ (2026–27) ಸಂಶೋಧನಾ ಪ್ರಸ್ತಾವನೆಗಳಿಗೆ ಆಹ್ವಾನ

ಬಿಪಿಆರ್&ಡಿ ಇವರು, ವಿದ್ವಾಂಸರಿಂದ, ಸಂಶೋಧಕರಿಂದ ಮತ್ತು ಶೈಕ್ಷಣಿಕ ಸಂಸ್ಥೆಗಳಿಂದ, ಪೊಲೀಸ್ ಮತ್ತು ಕರೆಕ್ಷನಲ್ ಅಡ್ಮಿನಿಸ್ಟ್ರೇಶನ್‌ಗೆ ಸಂಬಂಧಿತ ವಿಷಯಗಳ ಮೇಲಿನ ಸಂಶೋಧನಾ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ. ತಮ್ಮ ಪ್ರಸ್ತಾವನೆಗಳು ಸಮಕಾಲಿಕ ಸಮಸ್ಯೆಗಳು, ಉದ್ಭವಿಸಬಲ್ಲ ಸವಾಲುಗಳು, ಆವಿಷ್ಕಾರಿ ಪದ್ಧತಿಗಳು, ನೀತಿ ಮಧ್ಯಸ್ಥಿಕೆಗಳು ಮತ್ತು ಇನ್ನಿತರ ಪೊಲೀಸಿಂಗ್, ಕರೆಕ್ಷನ್ಸ್, ಕ್ರಿಮಿನಲ್ ಜಸ್ಟೀಸ್ ಹಾಗೂ ಪೂರಕ ಕ್ಷೇತ್ರಗಳಿಗೆ ಸಂಬಂಧಿತ ವಿಭಿನ್ನ ವಿಷಯಗಳಿಂದ ಕೂಡಿರುವ ಅಂಶಗಳ ಮೇಲೆ ಬೆಳಕು ಬೀರುವಂತಿರಬೇಕು.

ಸಂಶೋಧನಾ ಪರಿಕಲ್ಪನೆಗಳು, ಅರ್ಹತಾ ಮಾನದಂಡ, ಪ್ರಸ್ತಾವನೆಯ ಮಾರ್ಗಸೂಚಿಗಳು ಮತ್ತು ಪ್ರಸ್ತಾವನೆ ಸಲ್ಲಿಸುವ ಪ್ರಕ್ರಿಯೆ ಕುರಿತಾದ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಬಿಪಿಆರ್&ಡಿ ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ ದೂರವಾಣಿ 011–26734910 (e-mail: anushree@bprd.nic.in) ಸಂಪರ್ಕಿಸಿ.

ಸಹಾಯಕ ನಿರ್ದೇಶಕರು (ಸಂಶೋಧನೆ)
ಬಿಪಿಆರ್ & ಡಿ, ನವದೆಹಲಿ
CBC 19117/11/0006/2627

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಮುಖ್ಯ ನಗರ ಯೋಜಕರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560 002.

ಸಂಖ್ಯೆ: ಮು.ನ.ಯೋ/ಜಿಬಿಎ/CLU–18/2025–26/ಇ–272010 ದಿನಾಂಕ:07.10.2026

ಸಾರ್ವಜನಿಕ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14A–(1) (C) ರಡಿಯಲ್ಲಿ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು **ಕೈಗಾರಿಕೆ (Hi-Tech)** ವಲಯದಿಂದ **ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆಯು ಪ್ರಕಟವಾದ ದಿನದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ನರಸಿಂಹರಾಜ ಚೌಕ, ಬೆಂಗಳೂರು ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಪರಿಷ್ಕೃತ ಮಹಾಯೋಜನೆ–2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ.ಯುವರಾಜ್ ನರೇಂದ್ರ ಸ್ವಾಮಿ, ನಂ.305, ಪುರಿಗಾಲಿ ಗ್ರಾಮ, ಬಿ.ಜಿ ಪುರ ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ–571463	ಆನೇಕಲ್	ಸರ್ಜಾಪುರ	ಕೂಡ್ಲು	75/3	0ಎ–05ಗುಂ	ಕೈಗಾರಿಕೆ (Hi-Tech)	ವಸತಿ
					78/1	0ಎ–11ಗುಂ		
					78/2	0ಎ–25ಗುಂ		
					79/2	0ಎ–09.08ಗುಂ		
					79/3	0ಎ–10ಗುಂ		
					79/4	0ಎ–10ಗುಂ		
					80/4	0ಎ–01.08ಗುಂ		
					ಒಟ್ಟು	01ಎ–32ಗುಂ		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಸತಿ ಉದ್ದೇಶಕ್ಕಾಗಿ ಭೂ–ಉಪಯೋಗ ಬದಲಾವಣೆ ಮಾಡುವುದರಿಂದ, ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನ/ಅಪಾರ್ಟ್‌ಮೆಂಟ್ ಲಭ್ಯವಾಗುತ್ತವೆ. ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ಕೈಗಾರಿಕೆ (Hi-Tech)’** ವಲಯದಿಂದ **‘ವಸತಿ’** ಉಪಯೋಗಕ್ಕೆ ಭೂ–ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಮುಖ್ಯ ನಗರ ಯೋಜಕರು
ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಬೆಂಗಳೂರು.